-B.NO-61

ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ

-ಸಿ.ಪಿ.ಮಾಯಾಚಾರಿ



ಗರ್ಭರಲ್ಲಿ ನಡೆದ ವಿದುರಾಶ್ವತ್ಥ ಕಾಂಗ್ರೆಸ್ ಸಮ್ಮೇಳನ. ಮಹಾರಾಜರ ಜೊತೆ ಆದ ಒಪ್ಪಂದದಂತೆ ಏರಿದ ಧ್ವಜಗಳ ಹಾರಾಟ. ಎಡಗಡೆ ಸಂಸ್ಥಾನಿ ಧ್ವಜ- ಬಲಗಡೆ ತ್ರಿವರ್ಣ ಧ್ವಜ

ಬ್ರಿಟಿಷರ ವಿರುದ್ಧ ಕರ್ನಾಟಕದ ಜನತೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಇತಿಹಾಸ ಬಹು ದೀರ್ಘವಾದುದು. ಬ್ರಿಟಿಷರ ವಿರುದ್ಧ ದೊಡ್ಡ ಜನಾಂದೋಲನ ಪಾಳೆಯಪಟ್ಟು ಸಶಸ್ತ್ರ ರೂಪದ (೧೮೯೯-೧೯೦೦) ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಬೀಜ ನೆಟ್ಟಿತು. ಅನಂತರ ಭಾಲ್ಕಿಯ ಬಂಡಾಯ (೧೮೫೭) ಕಿತ್ತೂರಿನ ಚೆನ್ನಮ್ಮ (೧೮೨೪) ಸಂಗೊಳ್ಳಿರಾಯಣ್ಣ (೧೮೩೧) ಸುರಪುರ, ನರಗುಂದದ ಬಾಬಾ ಸಾಹೇಬ್ (೧೮೩೫) ಸ್ವಾತಂತ್ರ್ಯ ಜ್ಯೋತಿ ಸಂಗವಳ್ಳಿಗಾಗಿ ಕೋಡಿಕೊಂಡರು. ತರುವಾಯ ಜನಸಮುದಾಯ ತಮ್ಮ ರಾಷ್ಟ್ರಪ್ರೇಮದಿಂದ, ಬೆಂಗಳೂರು ಚಿಪ್ಪಿಗ ದಂಗೆಗಳಲ್ಲಿ ಮಾಡಿದ ಅಸಾಧಾರಣ ಹೋರಾಟ ಆರಂಭವಾಯಿತು. ಕರ್ನಾಟಕದ ಎಲ್ಲಾ ಜನತೆ ಈ ಹೋರಾಟದ ಮುಖ್ಯವಾಹಿನಿಯಲ್ಲಿ ಧುಮುಕಿದರು. ಆ ವೀರಗಾಥೆಯ ನೋಟ ಇಲ್ಲಿದೆ.

ಭಾರತದ ವಿಶಾಲ ಆಗಸದಲ್ಲಿ ಸ್ವಾತಂತ್ರ್ಯ ಸೂರ್ಯನು ಉದಯಿಸಿ ಇಂದಿಗೆ (ಆಗಸ್ಟ್ ೧೫, ೧೯೪೪) ೪೭ ವರ್ಷಗಳು ಸಂದವು. ವ್ಯಾಪಾರಕ್ಕೆಂದು ಬಂದು, ಈ ದೇಶವನ್ನು ಸುಮಾರು ೧೯೦ ವರ್ಷಗಳ ಕಾಲ ಆಳಿದ ಬ್ರಿಟಿಷರನ್ನು ಇಲ್ಲಿಂದ ಕಾಲ್ತೆಗೆಯುವಂತೆ ಮಾಡಬೇಕಾದರೆ, ಗಾಂಧೀ ಪ್ರಣೀತ ಸತ್ಯಾಗ್ರಹ ಮತ್ತು ಅಹಿಂಸೆಗಳೇ ನಮ್ಮ ಪರಮಾಸ್ತ್ರಗಳಾದವು. ಮಹಾತ್ಮಾ ಗಾಂಧೀಜಿಯವರು ನಮ್ಮ ಸ್ವಾತಂತ್ರ್ಯ ಹೋರಾಟದ ಸಾರಥ್ಯ ವಹಿಸಿ, ಹೆಚ್ಚಿನ ರಕ್ತಪಾತವಿಲ್ಲದೆ ಸ್ವಾತಂತ್ರ್ಯ ತರದುಕೊಟ್ಟರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪಾಲು ಬಹು ದೊಡ್ಡದು. ೧೮೮೫ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಜನ್ಮ ತಾಳಿ ಜನರನ್ನು ಹೋರಾಟಕ್ಕೆ ಅಣಿಗೊಳಿಸುವ ಮುಂಚೆಯೇ ಕರ್ನಾಟಕದಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತಿಕೊಂಡಿತ್ತು. ಕಿತ್ತೂರಿನ ರಾಣಿ ಚೆನ್ನಮ್ಮ ೧೮೨೪ರಲ್ಲಿ ಬ್ರಿಟೀಷರ ವಿರುದ್ಧ ನಡೆಸಿದ ಹೋರಾಟ, ಭಾರತದ ಸ್ವಾತಂತ್ರ್ಯ ಹೋರಾಟದ ದಿಕ್ಸೂಚಿಯಾಯಿತು. ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾ ಸಾಹೇಬ, ಮುಂಡರಗಿಯ ಭೀಮರಾಯ, ಸುರಪುರದ ವೆಂಕಟಪ್ಪ ನಾಯಕ, ಮುಧೋಳದ ಹಲಗಲಿ ಬೇಡರು ಬ್ರಿಟಿಷ್ ಆಳರಸರಿಗೆ ಕಾಲಕಾಲಕ್ಕೆ ಚಳ್ಳೆ ಹಣ್ಣು ತಿನ್ನಿಸಿದ ಘಟನೆಗಳು ಇತಿಹಾಸದ ವೀರಗಾಥೆಗಳಾಗಿ ಅಜರಾಮರವಾಗಿ ಉಳಿದಿವೆ.

ಅನಂತರ, ಮಹಾತ್ಮಾಗಾಂಧೀ ಅವರ ನೇತೃತ್ವದಲ್ಲಿ ನೆಹರು, ಸರ್ದಾರ್ ಪಟೇಲ್, ಸುಭಾಷ್ ಚಂದ್ರ, ಆಝಾದ್ ಆದಿಯಾಗಿ ಹಲವಾರು ಕಾಂಗ್ರೆಸ್ ನೇತಾರರು ಭಾರತದ ಉದ್ದಗಲ ಸಂಚರಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದರು. ಈ ಪ್ರೇರಣೆಯ ಫಲವಾಗಿ ೧೯೧೯ರಿಂದ ೧೯೪೭ರವರೆಗೆ ಸತತ ೨೮ ವರ್ಷಗಳ ಕಾಲ ದೇಶಾದ್ಯಂತ ಅಹಿಂಸಾತ್ಮಕ ಹೋರಾಟ ನಡೆದು, ೧೯೪೭ರ ಆಗಸ್ಟ್ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಯಿತು.

ಸ್ವಾತಂತ್ರ್ಯ ಹೋರಾಟಕ್ಕೆ ಚಾಲನೆ

ಕಾಂಗ್ರೆಸ್ಸು ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳನ್ನು ತೀವ್ರಗೊಳಿಸಿದಂತೆಲ್ಲಾ, ಜನಸಾಮಾನ್ಯರಲ್ಲಿ ಬ್ರಿಟಿಷರನ್ನು ವಿರೋಧಿಸುವ ಭಾವನೆ ಹೆಡೆಯೆತ್ತತೊಡಗಿತು. ೧೯೨೮ರಲ್ಲಿ ಗುಜರಾತ್‌ನ ಬಾರ್ಡೋಲಿ ರೈತರು ಬ್ರಿಟೀಷರಿಗೆ ತಾವು ಕರ ನೀಡುವುದಿಲ್ಲವೆಂದು ಕರ ನಿರಾಕರಣ ಚಳವಳಿಗೆ ಮುಂದಾದರು. ಈ ಹೋರಾಟ, ಪತ್ರಿಕೆಗಳ ಮೂಲಕ ಭಾರತದ ತುಂಬೆಲ್ಲಾ ಪ್ರಚುರವಾಯಿತು. ೧೯೨೯ರಲ್ಲಿ ಲಾಹೋರಿನಲ್ಲಿ ಜರುಗಿದ ಅಧಿವೇಶನದಲ್ಲಿ ಕಾಂಗ್ರೆಸ್ ಸಂಪೂರ್ಣ ಸ್ವಾತಂತ್ರ್ಯದ ಗೊತ್ತುವಳಿಯನ್ನು ಅಂಗೀಕರಿಸಿತು. ಇದರಿಂದ ಸ್ವಾತಂತ್ರ್ಯ ಹೋರಾಟಕ್ಕೆ ಇನ್ನಷ್ಟು ಚಾಲನೆ ದೊರೆಯಿತು. ೧೯೩೦ರ ಫೆಬ್ರವರಿಯಲ್ಲಿ ಸಾಬರಮತಿ ಆಶ್ರಮದಲ್ಲಿ ಜರುಗಿದ ಕಾಂಗ್ರೆಸ್ ಕಾರ್ಯಕಾರಿಣಿಯು "ಸ್ವಾತಂತ್ರ್ಯ ಹೋರಾಟದ ಕೊನೆಯ ಕಾಳಗಕ್ಕೆ" ಅಣಿಯಾಗಲು ಜನತೆಗೆ ಕರೆ ನೀಡಿತು. ಇದಕ್ಕಾಗಿ ಕಾನೂನು ಭಂಗ ಚಳವಳಿಯನ್ನು ಆರಂಭಿಸಬೇಕು, ಈ ಚಳವಳಿ ಅಹಿಂಸಾತ್ಮಕವಾಗಿರಬೇಕೆಂದು ಸಾರಿತು. ಕರ್ನಾಟಕದ ಶ್ರೀ ಗಂಗಾಧರರಾವ್ ದೇಶಪಾಂಡೆ ಹಾಗೂ ಡಾ|| ಹರ್ಡಿಕರ್ ಮುಂತಾದವರು ಈ ಸಭೆಯಲ್ಲಿ ಪಾಲ್ಗೊಂಡು ಬಂದು, ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳವಳಿಯನ್ನು ಮುನ್ನಡೆಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲು ಮುಂದಾದರು.

ಸ್ವಯಂ ಬಂಧನಕ್ಕೆ ಒಳಗಾಗುತ್ತಿರುವ ಮಹಿಳಾ ಸ್ವಯಂ ಸೇವಕರು

ಕರ್ನಾಟಕದಲ್ಲಿ ಹೋರಾಟ

ಕರ್ನಾಟಕದಲ್ಲಿ ಈ ಹೋರಾಟ ಹೆಚ್ಚಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಕೇಂದ್ರೀಕೃತವಾಯಿತು. ಇದಕ್ಕೆ ಕಾರಣ, ರಾಜ್ಯದ ದಕ್ಷಿಣ ಭಾಗ, ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಅಲ್ಲಿನ ರಾಜರು ಜನಪರ ಕಾರ್ಯಕ್ರಮಗಳನ್ನು ರೂಪಿಸಿ ಜನರೊಂದಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದ್ದರು. ಹೀಗಾಗಿ ದಕ್ಷಿಣ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಬಿಸಿ ಅಷ್ಟೊಂದು ತಾಕಲಿಲ್ಲ. ಉತ್ತರ ಕರ್ನಾಟಕದ ಜಿಲ್ಲೆಗಳೆಲ್ಲಾ ನೇರವಾಗಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಬ್ರಿಟಿಷರೊಂದಿಗಿನ ಸೆಣಸು ಅಲ್ಲಿನ ಜನರಿಗೆ ಅನಿವಾರ್ಯವಾಯಿತು.

೧೯೩೦ರ ಏಪ್ರಿಲ್ ೬ರಂದು ದ್ಹಂಡಿಯಲ್ಲಿ ಉಪ್ಪಿನ ಕಾಯಿದೆ ಭಂಗ (ಉಪ್ಪಿನ ಸತ್ಯಾಗ್ರಹ)ಮಾಡುವುದಾಗಿ ಘೋಷಿಸಿ, ಗಾಂಧೀಜಿಯವರು ಮಾರ್ಚ್ ೧೨ರಂದೇ ಸಾಬರಮತಿಯಿಂದ ದಂಡಿಯವರೆಗೆ ಯಾತ್ರೆ ಆರಂಭಿಸಿದರು. ೭೮ ಸತ್ಯಾಗ್ರಹಿಗಳ ಈ ತಂಡದಲ್ಲಿ ಕರ್ನಾಟಕದ ಮೈಲಾರ ಮಹದೇವಪ್ಪ ಅವರೂ ಇದ್ದರು. ಗಾಂಧೀಯವರ ದಂಡೀ ಯಾತ್ರೆಯ ಮಾದರಿಯಲ್ಲಿ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ಉಪ್ಪಿನ ಕಾಯ್ದೆ ಭಂಗ ಮಾಡುವುದರ ಮೂಲಕ ಉಪ್ಪಿನ ಸತ್ಯಾಗ್ರಹ ಆರಂಭಿಸಲು ಕರ್ನಾಟಕದ ಸತ್ಯಾಗ್ರಹಿಗಳು ನಿರ್ಧರಿಸಿದರು.

ಬ್ರಿಟಿಷರು ಉಪ್ಪಿನ ಮೇಲೆ ಒಂದು ಮಣಕ್ಕೆ (೮೨ ಪೌಂಡು) ಒಂದು ರೂಪಾಯಿ ನಾಲ್ಕಾಣೆ ಕರ ವಿಧಿಸುತ್ತಿದ್ದರು. ಈ ದೇಶವನ್ನು ಆಳಲು ಬಂದು, ಇಂಥ ಅನ್ಯಾಯದ ಕರ ವಿಧಿಸುವುದನ್ನು ವಿರೋಧಿಸುವ ಮೂಲಕ ಬ್ರಿಟಿಷರನ್ನು ಇಲ್ಲಿಂದ ಕಾಲ್ತೆಗೆಯುವಂತೆ ಮಾಡುವುದು ಗಾಂಧೀ ಪ್ರಣೀತ ಈ ಸತ್ಯಾಗ್ರಹದ ಉದ್ದೇಶವಾಗಿತ್ತು. "ಉಪ್ಪು ಯಾರಿಗೆ ಬೇಡ? ಬಡವ ಬಲ್ಲಿದರೆಲ್ಲರಿಗೂ ಬೇಕಾದುದರಿಂದ, ಉಪ್ಪಿಗೂ ಮತ್ತು ಜನಸಮುದಾಯಕ್ಕೂ ಇರುವ ಭಾವನಾತ್ಮಕ ನಂಟು ಎಂತಹದೆಂಬುದನ್ನು ಅರಿತಿದ್ದ ಗಾಂಧೀಜಿ ಮೊಟ್ಟ ಮೊದಲಿಗೆ ಉಪ್ಪಿನ ಕರವನ್ನು ವಿರೋಧಿಸುವ ಮೂಲಕ ಕಾಯ್ದೆ ಭಂಗ ಚಳವಳಿಗೆ ಮುಂದಾದುದು ಅತ್ಯಂತ ಬುದ್ಧಿವಂತಿಕೆಯ ಕ್ರಮವಾಗಿತ್ತು. ಗಾಂಧೀಜಿಯ ಉಪ್ಪಿನ ಸತ್ಯಾಗ್ರಹ, ನಿರೀಕ್ಷಿಸಿದಂತೆ ಜನಸಾಮಾನ್ಯರ ಹೃದಯ ತಟ್ಟಿತು. ಜನರು ಬ್ರಿಟಿಷರ ವಿರುದ್ಧ ಕಾಯ್ದೆ ಭಂಗದ ಮೂಲಕ ಹೋರಾಟಕ್ಕೆ ಮುಂದಾದರು.

ಕರ್ನಾಟಕದಲ್ಲಿ, ಹೋರಾಟವನ್ನು ಸಂಘಟಿಸಲು ಮತ್ತು ನಿಧಿ ಸಂಗ್ರಹಿಸಲು ಧಾರವಾಡದ ಶ್ರೀರಂಗರಾವ್ ದಿವಾಕರ ಆದಿಯಾಗಿ ೭ ಜನರ ಸತ್ಯಾಗ್ರಹ ಮಂಡಳ ಅಸ್ತಿತ್ವಕ್ಕೆ ಬಂತು. ಶ್ರೀ ರಂಗನಾಥ ದಿವಾಕರ (ಧಾರವಾಡ) ಶ್ರೀನಿವಾಸರಾವ್ ಕೌಜಲಗಿ, (ವಿಜಾಪುರ) ಕೆ.ಗುರುರಾಜರಾವ್ (ಬಳ್ಳಾರಿ) ಬಿ.ಎಂ. ಬಸ್ಸೂರ (ಉ.ಕನ್ನಡ) ವಿಠಲರಾವ್ ಕಾಮತ (ಉಡುಪಿ) ಆರ್.ಎಸ್.ಹುಕ್ಕೇರಿಕರ್ (ಧಾರವಾಡ) ಟಿ.ಎಸ್. ನಾಯಕ್(ಅಂಕೋಲೆ), ಎಂ.ಪಿ. ನಾಡಕರ್ಣಿ, ಬಾಸರಗೋಡು ರಾಮ ನಾಯಕ್, ಸ್ವಾಮಿ ವಿದ್ಯಾನಂದ, ಶಂಕರ ರಾವ್ ಗುಳವಾಡಿ ಮತ್ತು ಅನಂತ ಮಹಾಲೆ (ಉ.ಕ.) ಮುಂತಾದ ನಾಯಕರು ತಮ್ಮ ತಮ್ಮ ಪ್ರದೇಶಗಳಲ್ಲಿ ಸಂಚರಿಸಿ ಸತ್ಯಾಗ್ರಹದ ಉದ್ದೇಶಗಳನ್ನು ಜನತೆಗೆ ವಿವರಿಸಿ, ಸತ್ಯಾಗ್ರಹಕ್ಕೆ ಅಣಿಗೊಳಿಸಿದರು.

ಕರ್ನಾಟಕದಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಏಪ್ರಿಲ್ ೧೩ರಂದು ಆರಂಭಿಸುವುದೆಂದು ನಿರ್ಧರಿಸಲಾಯಿತು. ಏಪ್ರಿಲ್ ೧೩ ಭಾರತದ ಇತಿಹಾಸದಲ್ಲಿ, ಭಾರತೀಯರ ಪಾಲಿಗೆ ಒಂದು ಕರಾಳ ದಿನ. ೧೯೧೯ರಲ್ಲಿ ಅದೇ ದಿನದಂದು ಜಲಿಯನ್‌ವಾಲಾಬಾಗ್ ನಲ್ಲಿ ಜನರಲ್ ಡಯರ್‌ನ ಪಾಶವೀ ಆಜ್ಞೆಯಿಂದಾಗಿ ಎಣಿಯಿಲ್ಲದಷ್ಟು ಸತ್ಯಾಗ್ರಹಿಗಳು ಬ್ರಿಟಿಷರ ಗುಂಡೇಟಿಗೆ ಬಲಿಯಾಗಿದ್ದರು. ಆ ದಿನದ ಕಹಿ ನೆನಪು ಪ್ರತಿ ಭಾರತೀಯನ ಚಿತ್ತ ಭಿತ್ತಿಯ ಮೇಲೆ ಅಚ್ಚೊತ್ತಿ ನಿಂತಿತ್ತು. ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧದ ಕಾನೂನು ಭಂಗ ಚಳುವಳಿಗೆ ಏಪ್ರಿಲ್ ೧೩ನ್ನು ಆಯ್ಕೆ ಮಾಡಿದುದು, ಬ್ರಿಟಿಷರ ಕ್ರೌರ್ಯವನ್ನು ಎತ್ತಿ ತೋರಿ ಭಾರತೀಯರಲ್ಲಿ ಸ್ವಾತಂತ್ರ್ಯ ಪ್ರಜ್ಞೆಯನ್ನು ಉದ್ದೀಪನಗೊಳಿಸುವುದಾಗಿತ್ತು.

ಅಂಕೋಲದತ್ತ ಸತ್ಯಾಗ್ರಹಿಗಳು

ಹಿಂದೂಸ್ತಾನಿ ಸೇವಾದಳದ ಆದ್ಯ ಪ್ರವರ್ತಕ ಡಾ|| ಹರ್ಡೀಕರ್, ಹಣವಂತ ರಾವ್ ಕೌಜಲಗಿ, ಕರ್ನಾಡ ಸದಾಶಿವ ರಾಯ, ರಂಗನಾಥ ದಿವಾಕರ, ಬಿಂದು ಮಾಧವ, ಹೊಸಮನಿ ಪರಣ್ಣ ಅವರು ಸತ್ಯಾಗ್ರಹಿಗಳ ಸಂಘಟನೆಯಲ್ಲಿ ಮಂಚೂಣಿಯಲ್ಲಿದ್ದು, ಸತ್ಯಾಗ್ರಹಿಗಳಿಗೆ ಹುರುಪು ತುಂಬಿದರು. ಹುಬ್ಬಳ್ಳಿಯಲ್ಲಿದ್ದ ಹಿಂದೂಸ್ತಾನಿ ಸೇವಾದಳದ ಮುಖ್ಯ ಕಛೇರಿಯಿಂದ ದಿವಾಕರ ಮತ್ತು ಅವರ ಪತ್ನಿ ರಾಧಾಬಾಯಿ, ರಾಷ್ಟ್ರಧ್ವಜ ಹಿಡಿದು ಮುನ್ನಡೆಸಿದರು. ಈ ತಂಡ ಸಾಗುತ್ತಿದ್ದ ದಾರಿಯುದ್ದಕ್ಕೂ ಹಳ್ಳಿಗರು ಧ್ವಜಕ್ಕೆ ಆರತಿ ಮಾಡಿ ಹೂಮಾಲೆ ಅರ್ಪಿಸುತ್ತಿದ್ದರು. ಇನ್ನು ಕೆಲವರು ಸತ್ಯಾಗ್ರಹಿಗಳ ಜೋಳಿಗೆಗೆ ಹಣ ಮತ್ತು ಚಿನ್ನಾಭರಣಗಳನ್ನು ಅರ್ಪಿಸುತ್ತಿದ್ದರು. ಏಪ್ರಿಲ್ 13ರ ಮುಂಚೆಯೇ ಹುಬ್ಬಳ್ಳಿ, ದಾವಣಗೆರೆ, ಉಡುಪಿ ಮತ್ತು ಬೆಳಗಾವಿ ಕಡೆಗಳಿಂದ ಸತ್ಯಾಗ್ರಹಿಗಳ ತಂಡಗಳು

ಒಂದು ಅಪರೂಪದ ಚಿತ್ರ: ಸಂಕೇಶ್ವರದಲ್ಲಿ ನಡೆದ ಹೋಂರೂಲ್ ಲೀಗ್ ಸಮ್ಮೇಳನ (೧೯೧೬) ಕಾರ್ಯ ಕರ್ತರೊಡನೆ ತಿಲಕರು .ನಿಂತವರು ಎಡದಿಂದ ದಿ.ಎಸ್. ಚಂದಗಡಕರ್, ಪಿ.ಜಿ. ಕುಲಕರ್ಣಿ, ಬಿ.ಎಚ್.ದೇಶಪಾಂಡೆ; ಕುರ್ಚಿಯಲ್ಲಿ ಲೋಕಮಾನ್ಯ ತಿಲಕ್, ದಾದಾಸಾಹೇಬ್ ಖಾಪರ್ಡೆ; ಕೂತವರು ನೀಲಕಂಠ ಆರ್.ದೇಶಪಾಂಡೆ ವಾಮನ್ ಆರ್ ದೇಶಪಾಂಡೆ ಮತ್ತು ಅಪ್ಪಾಜಿ ಕೃಷ್ಣ ದೇಶಪಾಂಡೆ

ತರಬೇತಿ ಹೊಂದಿದ ಸ್ವಯಂಸೇವಕರ ಪಡೆ ಏಪ್ರಿಲ್ ೬ರಂದು ಕಾಲ್ನಡಿಗೆಯಿಂದ ಉ. ಕನ್ನಡ ಜಿಲ್ಲೆಯ ಕರಾವಳಿ ತೀರದ ಅಂಕೋಲೆಗೆ ಹೊರಟಿತು. ಏಪ್ರಿಲ್ ೬ರಂದೇ ಗಾಂಧೀಜಿಯವರು ದಂಡಿಯಲ್ಲಿ ಉಪ್ಪಿನ ಕಾಯ್ದೆ ಮುರಿದದ್ದಿರಿಂದ, ಆ ದಿನ, ಕರ್ನಾಟಕದ ಸತ್ಯಾಗ್ರಹಿಗಳಿಗೆ ತಮ್ಮ ಹೋರಾಟದ ಆರಂಭದ ದಿನವಾಯಿತು. ಸತ್ಯಾಗ್ರಹಿಗಳ ಈ ತಂಡವನ್ನು ರಂಗನಾಥ ದಿವಾಕರ ಅಂಕೋಲೆಗೆ ಬಂದು ತಲುಪಿದವು.

ಸತ್ಯಾಗ್ರಹಿಗಳಿಂದ ಕಾನೂನು ಭಂಗ

ಏಪ್ರಿಲ್ ೧೩ರಂದು ಮಧ್ಯಾಹ್ನ ಅಂಕೋಲೆಯ ತಾಲ್ಲೂಕು ಕಛೇರಿಯ ಎದುರು ಸತ್ಯಾಗ್ರಹಿಗಳು ಒಲೆಹೂಡಿ, ಉಪ್ಪುನೀರನ್ನು ಕಾಯಿಸಿ, ಉಪ್ಪು ತಯಾರಿಸಿ, ತಾವು ತಯಾರಿಸಿದ 'ಸ್ವತಂತ್ರ' ಉಪ್ಪನ್ನು ಲಿಲಾವಿಗೆ ಹಚ್ಚಿದರು. ಅಕ್ರಮವಾಗಿ ಮಾಡಿದ ಈ ಉಪ್ಪನ್ನು ಅಂಕೋಲೆಯ ರೇವು ಹೊನ್ನಪ್ಪ

ನಾಯಕ, ಕಾರವಾರದ ಭುಜಲೆ, ದಾವಣಗೆರೆಯ ಶ್ರೀನಿವಾಸ ಶೆಟ್ಟಿ ಹಾಗೂ ಹರಿಹರ ಶೆಟ್ಟರು ಖರೀದಿಸಿದರು. ಬ್ರಿಟಿಷ್ ಸರಕಾರ ನಮ್ಮ ಮೇಲೆ ಹೇರಿದ ಅನ್ಯಾಯದ ಕಾಯಿದೆಗಳನ್ನು ಒಂದರ ನಂತರ ಒಂದರಂತೆ ಮುರಿಯುತ್ತಾ ಸ್ವಾತಂತ್ರ್ಯಗಳಿಸೋಣ ಎಂದು ಸತ್ಯಾಗ್ರಹಿ ಸ್ವಾಮಿ ವಿದ್ಯಾನಂದರು ಕೂಡಿದ ಜನಸ್ತೋಮಕ್ಕೆ ಕರೆ ನೀಡಿದರು.

ಸತ್ಯಾಗ್ರಹಿಗಳ ಈ ಕಾಯ್ದೆ ಭಂಗ ಚಳವಳಿಯ ಬಗ್ಗೆ ಸಂಪೂರ್ಣವಾಗಿ ತಿಳಿದಿದ್ದ ಬ್ರಿಟಿಷ್ ಸರ್ಕಾರ, ತಕ್ಷಣವೇ ಸತ್ಯಾಗ್ರಹಿಗಳ ಮೇಲೆ ಹರಿಹಾಯದೆ, ಕೇವಲ ನಾಯಕರನ್ನು ಬಂಧಿಸಲು ಮುಂದಾಯಿತು. ಉಪ್ಪಿನ ಕಾಯಿದೆ ಭಂಗ ಮಾಡಿದ ಆರೋಪಕ್ಕಾಗಿ ದಳಪತಿ ಎಂ.ಪಿ. ನಾಡಕರ್ಣಿ ಹಾಗೂ ಸ್ವಾಮಿ ವಿದ್ಯಾನಂದರನ್ನು ಮರುದಿನ ಬೆಳಕು ಹರಿಯುವುದರೊಳಗಾಗಿ ಬಂಧಿಸಿತು. ಸ್ವಾಮಿ ವಿದ್ಯಾನಂದರಿಗೆ ೧ ವರ್ಷ ಸಶ್ರಮ ಶಿಕ್ಷೆ ಹಾಗೂ ಎಂ.ಪಿ.ನಾಡಕರ್ಣಿ ಅವರಿಗೆ ೬ ತಿಂಗಳ ಸಾದಾ ಶಿಕ್ಷೆ ವಿಧಿಸಿ, ಕಾರವಾರ ಜೇಲಿನಲ್ಲಿ ಇರಿಸಿತು. ತಮ್ಮ ನಾಯಕರ ಬಂಧನದಿಂದ ವಿಚಲಿತರಾಗದ ಜನರು, ತಾವೇ ತಾವಾಗಿ ಕಾಯ್ದೆ ಭಂಗ ಮಾಡಲು ಆರಂಭಿಸಿದರು.

ಅಂಕೋಲೆಗೆ ಬಂದಿದ್ದ ಕರ್ನಾಟಕದ ಸತ್ಯಾಗ್ರಹಿಗಳು ತಾವು ಉಳಿದುಕೊಂಡಿದ್ದ ಶಿಬಿರದಿಂದ ಹೊರ ಬೀಳಬೇಕೆಂದು ಪೊಲೀಸರು ಹಾಕಿದ ಬೆದರಿಕೆಗೆ ಸೊಪ್ಪು ಹಾಕಲಿಲ್ಲ. ಕೌಜಲಗಿ ಹಣಮಂತರಾವ್, ಕಾಕಾ ಕಾರಪಾನೀಸ (ವಿಜಾಪುರ) ತಿಮ್ಮಪ್ಪ ನಾಯಕ ಮೊದಲಾದ ೨೫ ಸತ್ಯಾಗ್ರಹಿಗಳನ್ನು ಬಂಧಿಸಿ ೬ ತಿಂಗಳ ಸಾದಾ ಶಿಕ್ಷೆ ಮತ್ತು ೧೦೦ ರೂ. ದಂಡ ವಿಧಿಸಲಾಯಿತು. ನಾಯಕರ ಬಂಧನದಿಂದಾಗಿ ಅಂಕೋಲೆ ತಾಲ್ಲೂಕಿನ ಜನರು ರೊಚ್ಚಿಗೆದ್ದರು. ಹಿಚ ಕಡ, ಕಡವಾ, ಕೇಣಿ, ಬೆಳಂಬಾರ, ಅವರ್ಸಾ, ಬೇಲಿಕೇರಿ ಮತ್ತು ಮಂಜಗುಣಿಯ ಸಾವಿರಾರು ಜನರು ತಮ್ಮ ಹಳ್ಳಿಗಳಿಂದ ಸಮುದ್ರಕ್ಕೆ ಹೋಗಿ ಉಪ್ಪಿನ ಮಣ್ಣನ್ನು ತುಂಬಿ ತಂದು ಅಂಕೋಲಾದ ತಾಲ್ಲೂಕು ಕಛೇರಿ ಮುಂದೆ ಉಪ್ಪು ತಯಾರಿಸಿ, 'ಕರಕೊಟ್ಟ ಉಪ್ಪನ್ನು ಯಾರೂ ತಿನ್ನಬಾರದು' ಎಂದು ಘೋಷಿಸಿದರು. ಸತ್ಯಾಗ್ರಹ ತೀವ್ರಗೊಂಡದ್ದನ್ನು ಅನುಲಕ್ಷಿಸಿದ ಸರ್ಕಾರ, ಸತ್ಯಾಗ್ರಹಿಗಳ ವಿರುದ್ಧ ತೀವ್ರಕ್ರಮ ಕೈಗೊಳ್ಳಲು ಹಿಂದೆ ಮುಂದೆ ನೋಡುವಂತಾಯಿತು. ಜನತೆಯ ಹೋರಾಟದ ಪುಮ್ಮಸ್ಸು ದಿನದಿಂದ ದಿನಕ್ಕೆ ಇಮ್ಮಡಿಸುತ್ತ ನಡೆಯಿತೇ ವಿನಃ ಕುಗ್ಗಲಿಲ್ಲ. ಈ ಹೋರಾಟದಲ್ಲಿ ಜನತೆಯ ಸಹಭಾಗಿತ್ವವನ್ನು ಅಂದಿನ ದಿನಗಳಲ್ಲಿ ಕಣ್ಣಾರೆ ಕಂಡ ಕವಿ ಶ್ರೀ ದಿನಕರ ದೇಸಾಯಿ.

''ನಾಡವರು ನಿಜ ನಾಡಿಗರು
ನೋಡು ಕಾಳಗವ ಹೂಡಿಹರು''
ಹಿಂದಿನ ಹುರುಪೇ ಇಂದಿಗೆ ಮೂಡಿ
ನಾಡವರೆಲ್ಲರೂ ಒಂದಡೆ ಕೂಡಿ
ಗಾಂಧಿ ಮಹಾತ್ಮರ ಕೊಂಬನು ಕೇಳಿ
ನೆಗೆದು ಕಾದುವರು ಧೈರ್ಯವ ತಾಳಿ
ನಾಡವರೇ ನಿಜ ನಾಡಿಗರು!!

ಎಂದು ಮನಸಾರೆ ತಮ್ಮ ಕಾವ್ಯ ಭಾಷೆಯಲ್ಲಿ ಹಾಡಿದರು. ಅಂಕೋಲಾದ ಉಪ್ಪಿನ ಸತ್ಯಾಗ್ರಹದ ಯಶಸ್ಸಿನಿಂದಾಗಿ, ಏಪ್ರಿಲ್ ೨೬ ರಂದು ಇಡೀ ಕರ್ನಾಟಕದಲ್ಲಿ ಕಾಯ್ದೆ ಭಂಗ ದಿನಾಚರಣೆಯನ್ನು ಪಾಲಿಸಬೇಕೆಂದು ಕರ್ನಾಟಕ ಸತ್ಯಾಗ್ರಹ ಸಮಿತಿಯು ಆದೇಶ ನೀಡಿತು. ಅದರಂತೆ, ಕಾಯಿದೆ ಭಂಗ ದಿನಾಚರಣೆಯನ್ನು ಕರ್ನಾಟಕದ ಉತ್ತರ ತುದಿಯಿಂದ ದಕ್ಷಿಣತುದಿಯವರೆಗೂ ಆಚರಿಸಲಾಯಿತು. ಕರಾವಳಿ ಪ್ರದೇಶದ ಅಂಕೋಲಾ, ಕಾರವಾರ, ಕುಮುಟಾ, ಗೋಕರ್ಣ ಮತ್ತು ಹೊನ್ನಾವರ ಗಳಲ್ಲಿ ನೂರಾರು ಜನರು ನಿತ್ಯವೂ ಉಪ್ಪಿನ ಕಾಯ್ದೆ ಮುರಿಯುವಂತಾಯಿತಲ್ಲದೆ, ವಾರವಾರಕ್ಕೆ ಜನರೇ ಉಪ್ಪಿನ ಸಂತೆ ನಡೆಸುವಂತಾಯಿತು. ಉಪ್ಪಿನ ಕಾಯ್ದೆ ಭಂಗ ಮಾಡುವುದರಿಂದೇನು ಲಾಭ? ಎಂದು ಮೂಗು ಮುರಿದಿದ್ದ ಬ್ರಿಟಿಷರಿಗೆ, ಏಪ್ರಿಲ್ ೬ ರಿಂದ ಜೂನ್ ೬ರವರೆಗಿನ ೨ ತಿಂಗಳ ಅವಧಿಯಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಎದ್ದ ಸ್ವಾತಂತ್ರ್ಯದ ಅಲೆ, ಅವರಿಗೆ ಚಿಂತೆಯನ್ನುಂಟು ಮಾಡಿತು.

ಶಾಸನ ಭಂಗ ಮಾಡಿದವರನ್ನು ದಂಡಿಸುವುದು ಮುಂಚಿನಂತೆ ಅಷ್ಟು ಸುಲಭವೆನ್ನಿಸಲಿಲ್ಲ. ಆದರೂ, ಬ್ರಿಟಿಷರು ತಮ್ಮ ಸಾಮೋಪಾಯ ಮತ್ತು ದಂಡೋಪಾಯಗಳನ್ನು ಬಳಸಿ, ಜನತೆಯಿಂದ ಕರ ಸಂಗ್ರಹಕ್ಕೆ ಪ್ರಯತ್ನ ಮುಂದುವರಿಸಿದರು. ಅಂಕೋಲಾ ಸಿರ್ಸಿ ಹಾಗೂ ಸಿದ್ದಾಪುರಗಳಲ್ಲಿನ ರೈತರು ಕರ ನಿರಾಕರಣೆಯ ಚಳವಳಿಯನ್ನು ನಿರಂತರವಾಗಿ ಮುಂದುವರಿಸಿದರು. ಬ್ರಿಟಿಷರ ಆದಾಯಕ್ಕೆ ಮೂಲವಾದ ಕಾಡಿನ ನಾಶ (ಜಂಗಲ್ ಸತ್ಯಾಗ್ರಹ) ಮಾಡುವುದು, ಪಾನ ಪ್ರತಿಬಂಧಕ್ಕಾಗಿ ಪಿಕೆಟಿಂಗ್, ಹುಲಬನ್ನಿ (ಭೂಕರ) ಕರ ನಿರಾಕರಣೆಯಂಥ ಚಳುವಳಿಗಳಿಂದಾಗಿ ಬ್ರಿಟಿಷರು ಈ ಪ್ರದೇಶದಲ್ಲಿ ಆಡಳಿತ ನಡೆಸುವುದೇ ಕಷ್ಟವಾಯಿತು. ಜನರಿಂದ ಕರ ಸಂಗ್ರಹಿಸಲು ತಯಾರಿಲ್ಲದ ಸ್ವಾತಂತ್ರ್ಯ ಪ್ರೇಮಿ ಪಟೇಲರು ರಾಜೀನಾಮೆ ನೀಡಲು ಮುಂದಾದರು. ಸಿರ್ಸಿ ತಾಲ್ಲೂಕಿನಲ್ಲಿ ೯೬, ಸಿದ್ದಾಪುರದಲ್ಲಿ ೨೫ ಹಾಗೂ ಅಂಕೋಲೆಯಲ್ಲಿ ೪೩ ಪಟೇಲರು ಸರ್ಕಾರಕ್ಕೆ ರಾಜೀನಾಮೆ ಕಳುಹಿಸಿ, ಕರ ನಿರಾಕರಣೆ ಚಳವಳಿಗೆ ದನಿಗೂಡಿಸಿದರು.

೧೯೩೧ ಮಾರ್ಚ್‌ನಲ್ಲಿ ಗಾಂಧಿ-ಐರ್ವಿನ್ ಮಧ್ಯ ಒಪ್ಪಂದವಾಯಿತು. ಈ ಒಪ್ಪಂದದಿಂದಾಗಿ ಕಡಲ ತೀರದ ಜನರಿಗೆ ಉಪ್ಪು ಮಾಡಿ ಮಾರುವ ಹಕ್ಕು ಪ್ರಾಪ್ತವಾಯಿತಲ್ಲದೆ, ಕರನಿರಾಕರಣೆ ಸಂಬಂಧದಲ್ಲಿ ಕೆಲಸ

ಕಳೆದುಕೊಂಡವರಿಗೆ ಕೆಲಸ, ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದ್ದ ನಾಗರಿಕರ ಆಸ್ತಿ ಪಾಸ್ತಿಗಳನ್ನು ಹಿಂದಿರುಗಿಸಲಾಯಿತು. ಕಾಂಗ್ರೆಸ್‌ನ ತೀರ್ಮಾನದಂತೆ, ಕರನಿರಾಕರಣ ಚಳವಳಿಯನ್ನು ನಿಲ್ಲಿಸಲಾಯಿತು.

ಆದರೆ, ೧೯೩೧ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಸಿದ್ದಾಪುರ ತಾಲ್ಲೂಕು ಹಾಗೂ ಧಾರವಾಡ ಜಿಲ್ಲೆಯ ಹಿರೇಕೆರೂರ ತಾಲ್ಲೂಕುಗಳಲ್ಲಿ ಸಕಾಲಕ್ಕೆ ಮಳೆಬಾರದೆ, ರೈತರು ಕಂಗಾಲಾಗಿ, ಕರ ನಿರಾಕರಣೆ ಚಳುವಳಿಯನ್ನು ಮುಂದುವರಿಸಿದರು. ರೈತರ ಸಂಕಷ್ಟಗಳ ನಿವೇದನೆಗೆ ೧೯೩೧ರ ಜನವರಿ ೨೫ ರಂದು ಹಿರೇಕೆರೂರಿನಲ್ಲಿ ಸುಮಾರು ೩ ಸಾವಿರ ರೈತರ ಸಭೆ ನಡೆದು ಕರ ನಿರಾಕರಣೆಗೆ ಹೋರಾಟದ ತೀರ್ಮಾನ ಕೈಗೊಳ್ಳಲಾಯಿತು. ಬಾಡ್ರೋಲಿ ರೈತರ ಕರ ನಿರಾಕರಣೆಯ ಚಳವಳಿಯನ್ನು ಕಣ್ಣಾರೆ ಕಂಡು ಬಂದಿದ್ದ ಕಚವಿ ಗ್ರಾಮದ ಶ್ರೀ ವೀರನಗೌಡ ಪಾಟೀಲರು ಇನ್ನೊಬ್ಬ ನಾಯಕ ಶ್ರೀ ಹುಕ್ಕೇರಿ ರಾಮರಾಯರೊಂದಿಗೆ ಇಡೀ ತಾಲ್ಲೂಕಿನ ರೈತರ ಸ್ಥಿತಿಗತಿಯನ್ನು ತಿಳಿದು ಕರನಿರಾಕರಣೆ ಹೋರಾಟಕ್ಕೆ ಸೂಕ್ತ ರಂಗಸಜ್ಜಿಕೆ ನಿರ್ಮಿಸಿದರು. ರೈತರ ಹೋರಾಟದ ಮುಂದೆ ಸರ್ಕಾರದ ಆಟ ನಡೆಯಲಿಲ್ಲ. ದಕ್ಷಿಣದ ಭಾಗದ ಕಮೀಷನರ್ ಡಬ್ಲ್ಯು. ಡಬ್ಲ್ಯು. ಸ್ಮಾರ್ಟ್ ಅವರು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ರಂಗನಾಥ್ ದಿವಾಕರರೊಂದಿಗೆ ಮಾತುಕತೆ ನಡೆಸಿ, ರೈತರಿಗೆ ಕೆಲವು ಸವಲತ್ತುಗಳನ್ನು ಪ್ರಕಟಿಸಿದರು.

ಹೀಗೆ, ಸಿರ್ಸಿ, ಸಿದ್ದಾಪುರ, ಅಂಕೋಲಾ ಮತ್ತು ಹಿರೇಕೆರೂರುಗಳಲ್ಲಿನ ರೈತರು, ಕರ ನಿರಾಕರಣೆ ಚಳವಳಿಯಲ್ಲಿ ಗಂಡು-ಹೆಣ್ಣು ಎನ್ನದೆ ಭಾಗಿಗಳಾಗಿ, ಪೊಲೀಸರ ಲಾಠಿ ಏಟು ತಿಂದು ಜೈಲು ವಾಸ ಅನುಭವಿಸಿ, ತಮ್ಮ ಸ್ವಾತಂತ್ರ್ಯ ಪ್ರೇಮವನ್ನು ಮೆರೆದರು.

ಸರ್ದಾರ್ ವಲ್ಲಭಭಾಯಿ ಪಟೇಲರು, ತಮ್ಮ ರಾಜ್ಯ ಗುಜರಾತಿನಲ್ಲಿ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸುವಾಗ, ಕರ್ನಾಟಕದ ಕರ ನಿರಾಕರಣ ಚಳವಳಿಯನ್ನು ಉಲ್ಲೇಖಿಸಿ, ಈ ನಾಡಿನ ಜನರ ಸ್ವಾತಂತ್ರ್ಯ ಪ್ರೇಮವನ್ನು ಮನಸಾರೆ ಹೊಗಳಿದ್ದುಂಟು.

ಕರ ನಿರಾಕರಣ ಚಳವಳಿ, ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದ ಒಂದು ವೀರ ಅಧ್ಯಾಯ.

೧೯೨೪ರ ಬೆಳಗಾವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಾಗಾಂಧೀಜಿ ಭಾಗವಹಿಸಿ, ಕನ್ನಡಿಗರ ಹೋರಾಟವನ್ನು ಪ್ರಶಂಸಿಸಿ, ಹೋರಾಟ ತೀವ್ರಗೊಳಿಸಲು ಕರೆ ನೀಡಿದರು. ಇದರಿಂದಾಗಿ ಕರ್ನಾಟಕದ ಎಲ್ಲೆಡೆಯೂ ಸ್ವಾತಂತ್ರ್ಯ ಪ್ರಜ್ಞೆ ಪಸರಿಸಿ, ಜನರು ಮತ್ತಷ್ಟು ಹೋರಾಟಕ್ಕೆ ಸಜ್ಜಾದರು. ಈ ಹೋರಾಟದ ಜತೆ ಜತೆಗೆ ಕರ್ನಾಟಕ ಏಕೀಕರಣ ಚಳವಳಿಯೂ ಬೆಸೆದು, ಕರ್ನಾಟಕದಲ್ಲಿ ಕಾಂಗ್ರೆಸ್ ನಾಯಕರ ಚಟುವಟಿಕೆಗಳು ಎಡೆಬಿಡದೆ ನಡೆದವು.

ಸ್ವಾತಂತ್ರ್ಯ ಮತ್ತು ಜವಾಬ್ದಾರಿಯುತ ಸರ್ಕಾರಕ್ಕಾಗಿ ಅಂದಿನ ಮೈಸೂರು ಅರಸರು ೧೯೨೦ರಷ್ಟು ಹಿಂದೆಯೇ ಬ್ರಿಟಿಷರೊಂದಿಗೆ ಹೋರಾಟ ಆರಂಭಿಸಿದ್ದರು. ಮುದವೀಡ ಕೃಷ್ಣರಾವ್, ತಾರಾನಾಥ ಮುಂತಾದವರು ಮೈಸೂರ್ ರಾಜ್ಯದ ಜನರಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿದರಾದರೂ, ಈ ಹೋರಾಟವನ್ನು ಬಲಿಯಗೊಡದಂತೆ ಅಧಿಕಾರಸ್ಥರು ತಡೆದರು. ೧೯೩೭ರಲ್ಲಿ ಮೈಸೂರು ರಾಜ್ಯ ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದ ನಂತರ ಕರ್ನಾಟಕದ ದಕ್ಷಿಣ ಭಾಗದಲ್ಲಿ ಸ್ವಾತಂತ್ರ್ಯ ಸಮರಕ್ಕೆ ತೀವ್ರ ಚಾಲನೆ ಸಿಕ್ಕಿತು. ೧೯೨೮ರ ಸುಲ್ತಾನ್ ಪೇಟ್ ಗಣಪತಿ ಗಲಭೆ, ಧ್ವಜ ಸತ್ಯಾಗ್ರಹ, ೧೯೩೮ರ ವಿದುರಾಶ್ವತ್ಥ ಗೋಳಿಬಾರ್ ಪ್ರಕರಣ ಮತ್ತು ಶಿವಪುರ ಕಾಂಗ್ರೆಸ್ ಅಧಿವೇಶನಗಳು ರಾಜ್ಯದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟನೆಗಳಲ್ಲಿ ಸೇರಿದವು.

ಚಲೇಜಾವ್ ಚಳವಳಿ

'ಬ್ರಿಟಿಷರೇ ಭಾರತದಿಂದ ತೊಲಗಿರಿ' ಎಂಬ ಘೋಷಣೆಯೊಂದಿಗೆ ಕಾಂಗ್ರೆಸ್ 'ಚಲೇಜಾವ್ ಚಳವಳಿಗೆ ಕರೆ ನೀಡಿತು. ಈ ಸಂದರ್ಭದಲ್ಲಿ, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಈಸೂರಿನಲ್ಲಿ ಗ್ರಾಮ ಸ್ವರಾಜ್ಯ ಸ್ಥಾಪಿಸುವ ಛಲದಿಂದ ಅಲ್ಲಿನ ನಾಗರಿಕರು ಬ್ರಿಟಿಷ್ ಆಡಳಿತವನ್ನು ಧಿಕ್ಕರಿಸಿದರು. ಊರಿಗೆ ಒಬ್ಬ ಆಡಳಿತಗಾರ ಮತ್ತು ರಕ್ಷಣಾಧಿಕಾರಿಯನ್ನು ತಮಗೆ ತಾವೇ ನೇಮಿಸಿಕೊಂಡರಲ್ಲದೆ, ಬ್ರಿಟಿಷ್ ಅಧಿಕಾರಿಗಳಿಗೆ ಊರಲ್ಲಿ ಪ್ರವೇಶ ನಿಷೇಧಿಸಿದರು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಗೋಲಿಬಾರು ನಡೆದು, ಸ್ವಾತಂತ್ರ್ಯಪ್ರಿಯ ಹೋರಾಟಗಾರನೇಕರು ಪ್ರಾಣ ತೆತ್ತರು. ದಾವಣಗೆರೆ, ಶ್ರವಣಬೆಳಗೊಳ ಮತ್ತು ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ವಿಜಾಪುರ ಮತ್ತಿತರೆಡೆಗಳಲ್ಲಿ ಗೋಲಿಬಾರ್‌ಗಳಾದವು. ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಕಾರವಾರ, ಬೆಳಗಾವಿ, ರಾಯಚೂರು, ವಿಜಾಪುರ ಮತ್ತು ಬೀದರ್‌ಗಳಲ್ಲಿ ಸತತ ಗಲಭೆಗಳು ನಡೆಯುವಂತಾಯಿತು. ಭಾರತ ರಕ್ಷಣಾ ಕಾಯ್ದೆ ಅಡಿಯಲ್ಲಿ ಒಂದೂವರೆ ಲಕ್ಷ ಜನರನ್ನು ಬ್ರಿಟಿಷ್ ಅಧಿಕಾರಿಗಳು ಬಂಧಿಸಿ ಜೈಲಿನಲ್ಲಿಟ್ಟಿದ್ದರು. ರಾಜ್ಯದ ಜೈಲುಗಳೆಲ್ಲ ಸತ್ಯಾಗ್ರಹಿಗಳಿಂದ ತುಂಬಿ ಹೋದವು. ಪೊಲೀಸರ ದೌರ್ಜನ್ಯ, ಲಾಠಿ ಛಾರ್ಜುಗಳು ದಿನ ನಿತ್ಯದ ಮಾತಾದವು. ರೊಚ್ಚಿಗೆದ್ದ ಜನ ಸಮುದಾಯ ಸರ್ಕಾರೀ ಆಸ್ತಿಪಾಸ್ತಿಗೆ ಧಕ್ಕೆಯುಂಟು ಮಾಡಲು ಹಿಂದೆ ಮುಂದೆ ನೋಡಲಿಲ್ಲ. ಅಸಹಕಾರ ಚಳವಳಿಯಿಂದಾಗಿ ಹರತಾಳಗಳು ನಿತ್ಯದ ಮಾತಾದವು. ಸರ್ಕಾರ ಕಾಂಗ್ರೆಸ್ಸನ್ನು ಕಾನೂನು

ಬಾಹಿರ ಸಂಸ್ಥೆಯೆಂದು ಘೋಷಿಸಿತು. ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳನ್ನು ತ್ಯಜಿಸಿ ಹೋರಾಟಕ್ಕೆ ಧುಮುಕಿ, ಸ್ವಾತಂತ್ರ್ಯ ಹೋರಾಟವನ್ನು ಗುರಿ ಮುಟ್ಟುವವರೆಗೆ ಮುನ್ನಡೆಸಿದರು. ಭಾರತದಾದ್ಯಂತ ಈ ಹೋರಾಟದ ಫಲವಾಗಿ ೧೯೪೭ರ ಆಗಸ್ಟ್ ೧೫ ರಂದು ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ನೀಡಿದರು.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೂ ಕರ್ನಾಟಕದಲ್ಲಿನ ಸರ್ಕಾರ ಇನ್ನು ಮೈಸೂರು ಅರಸರ ನಿಯಂತ್ರಣದಲ್ಲಿತ್ತು. ಕೇಂದ್ರದಲ್ಲಿನ ಬೆಳವಣಿಗೆಗಳಿಂದಾಗಿ ಮೈಸೂರು ಮಹಾರಾಜರು ರಾಜ್ಯದಲ್ಲಿ ಪ್ರಜಾರಾಜ್ಯ ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟ ಪರಿಣಾಮವಾಗಿ ೧೯೪೭ರ ಅಕ್ಟೋಬರ್ 24ರಂದು ವಿಜಯದಶಮಿಯ ದಿನ ಜವಾಬ್ದಾರಿಯುತ ಸರ್ಕಾರದ ಪ್ರಥಮ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂತು. ಅಂದು 'ಬೆಂಗಳೂರಿನ ಕಾಂಗ್ರೆಸ್ ಕಛೇರಿಯಿಂದ ರಾಜ್ಯದ ಆಡಳಿತ ಕೇಂದ್ರವಾದ ಅಶೋಕಾ ಕಛೇರಿ (ಇಂದಿನ ಹೈಕೋರ್ಟ್ ಕಟ್ಟಡ) ವರೆಗೆ ವಿಜಯೋತ್ಸವದ ಮೆರವಣಿಗೆ ವಿರ್ಪಡಿಸಿ, ಪ್ರಜಾಸತ್ತೆಯ ಗೆಲುವನ್ನು, ಸಂಭ್ರಮದಿಂದ ಆಚರಿಸಲಾಯಿತು.

ಲೇಖಕರ ಅವಗಾಹನೆಗೆ

'ಜನಪದ' ಪತ್ರಿಕೆಯನ್ನು ಸರ್ವಾಂಗ ಸುಂದರ ಮಾಸಿಕವನ್ನಾಗಿಸಲು ಓದುಗರಿಂದ ಲೇಖನ, ವ್ಯಂಗ್ಯ ಚಿತ್ರ, ಕವನ, ಚುಟುಕ, ಪ್ರಬಂಧ, ಛಾಯಾಚಿತ್ರ ಇತ್ಯಾದಿಗಳನ್ನು ಆಹ್ವಾನಿಸಲಾಗಿದೆ. ನಿಮ್ಮ ಬರಹ ಚಿತ್ರಗಳು ಈ ನಿಯಮಗಳಿಗೊಳಪಟ್ಟಿರಬೇಕು.

- ಕರ್ನಾಟಕದ ನಾಡು-ನುಡಿ, ಸಂಸ್ಕೃತಿ-ಪರಂಪರೆ, ಪ್ರವಾಸೀತಾಣ ವ್ಯಕ್ತಿಚಿತ್ರ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಕುರಿತ ಬರಹಗಳಿರಬೇಕು.
- ಬರಹಗಳನ್ನು ತಪ್ಪಿಲ್ಲದಂತೆ, ಸ್ಪುಟವಾಗಿ ಬರೆದಿರಬೇಕು ಇಲ್ಲವೇ ಟೈಪ್ ಮಾಡಿಸಿರಬೇಕು.
- ಲೇಖನ ಫುಲ್‌ಸ್ಕ್ಯಾಪ್ ಗಾತ್ರದ ಮೂರು ಪುಟಗಳನ್ನು ಮೀರಬಾರದು.
- ವ್ಯಂಗ್ಯ ಚಿತ್ರಗಳನ್ನು ಇಂಡಿಯನ್ ಇಂಕ್ ಬಳಸಿ ರಚಿಸಿರಬೇಕು. ಇಂಕ್‌ಪೆನ್, ಪೆನ್ಸಿಲ್‌ನಿಂದ ಬರೆದ ವ್ಯಂಗ್ಯಚಿತ್ರಗಳನ್ನು ಸ್ವೀಕರಿಸುವುದಿಲ್ಲ.
- 'ತಿಂಗಳ ಚಿತ್ರ'ಕ್ಕೆ ಕಳುಹಿಸುವ ಛಾಯಾಚಿತ್ರದ ಗಾತ್ರ ಕನಿಷ್ಠ 6X6 ಅಂಗುವಿರಬೇಕು.
- ಲೇಖಕರು ಲೇಖನದ ಜೊತೆ ತಮ್ಮ ಭಾವಚಿತ್ರ ಕಳುಹಿಸಬೇಕು.
- ಆಯ್ಕೆಕೃತ ಬರಹ ಚಿತ್ರಗಳನ್ನು ಹಿಂದಿರುಗಿಸುವುದಿಲ್ಲ. ಆ ಬಗ್ಗೆ ಪತ್ರ ಮುಖೇನ ತಿಳಿಸಲಾಗುವುದು. ಹಸ್ತ ಪ್ರತಿ, ಚಿತ್ರ ಬೇಕೆಂದಲ್ಲಿ ಸೂಕ್ತ ಗಾತ್ರದ ಲಕೋಟೆ ಮತ್ತು ಮೌಲ್ಯದ ಅಂಚೆ ಸ್ಟಾಂಪ್ ಇಟ್ಟಿರಬೇಕು.
- ಓದುಗರ ಸಲಹೆಗೆ ಸ್ವಾಗತ. ನಿಮ್ಮ ಬರಹ, ಚಿತ್ರಗಳಿಗೆ ಸೂಕ್ತ ಸಂಭಾವನೆ ನೀಡಲಾಗುವುದು.
- ಎಲ್ಲಾ ವಿಷಯಗಳಲ್ಲೂ ಸಂಪಾದಕರ ತೀರ್ಮಾನವೇ ಅಂತಿಮ.

-ಸಂಪಾದಕರು.

ಪತ್ರ ವ್ಯವಹಾರದ ವಿಳಾಸ

ಸಂಪಾದಕರು.
'ಜನಪದ' ಮಾಸಿಕ ವಾರ್ತಾ ಮತ್ತು ಪ್ರಚಾರ ಇಲಾಖೆ
ಪ್ರಕಟಣಾ ವಿಭಾಗ, ಎರಡನೇ ಮಹಡಿ,
ಪೋಡಿಯಂ ಬ್ಲಾಕ್,
'ದಾ ॥ ಅಂಬೇಡ್ಕರ್ ರಸ್ತೆ,
ಬೆಂಗಳೂರು-೫೬೦ ೦೦೧.

ತಿದ್ದುಪಡಿ

ಜುಲೈ ತಿಂಗಳ 'ಜನಪದ ಬಂಧ -೧' ರಲ್ಲಿ ಮೇಲಿನಿಂದ ಕೆಳಗೆ ಕ್ರಮಸಂಖ್ಯೆ ೬, ೭, ೯, ೧೦, ೧೧, ೧೨, ೧೩, ೧೪, ೧೫, ೧೬ ಮತ್ತು ೧೭ಕ್ಕೆ ನೀಡಿರುವ ಸುಳಿವುಗಳಲ್ಲಿ ಪ್ರಮಾದವಶಾತ್ ತಪ್ಪಾಗಿದೆ. ಅವುಗಳನ್ನು ಅನುಕ್ರಮವಾಗಿ ೬, ೮, ೧೦, ೧೧, ೧೪, ೧೫, ೧೬, ೧೭, ೨೦, ೨೧ ಮತ್ತು ೨೨ರ ಸುಳಿವುಗಳೆಂದು ಓದಿಕೊಳ್ಳಬೇಕಾಗಿ ವಿನಂತಿ. ತಪ್ಪಿಗಾಗಿ ವಿಷಾದಿಸುತ್ತೇವೆ.

ಕಳೆದ ಸಂಚಿಕೆಯಲ್ಲಿ 'ಅಲ್ಪ ಸ್ವಲ್ಪ' ಕವನ ಬರೆದವರು ಎಲ್. ಮಂಜುಷ್ರ. ಇವರ ಹೆಸರು ಪ್ರಮಾದವಶಾತ್ ಬಿಟ್ಟು ಹೋಗಿರುವುದಕ್ಕೆ ವಿಷಾದಿಸುತ್ತೇವೆ.

ಸಂಪಾದಕರು